ನಾನು ಮಡಿ ಮುಗಿಸಿ ಬರೋ ಮೊದಲೇ ನೀನು ಬಾಗಿಲು ಮುಂದುಮಾಡಿಕೊಂಡು ಡ್ಯೂಟಿಗೆ ಹೋದೆಯಲ್ಲ, ಹೋಗೋ ಮೊದಲು ಅಪ್ಪನ ಟ್ರಂಕ್ ಏನಾದರೂ ತೆಗೆದಿದ್ದೆಯಾ ಅಂತ ಕೇಳೋಕ್ಕೆ' ಅಂದರು. 'ಹೌದು, ಸಿಲ್ಕ್ ಶರ್ಟ್ ಗುಂಡಿ ಹುಡುಕೋಕ್ಕೆ ತೆಗೆದಿದ್ದೆ, ಯಾಕೆ?' ಅಂದ ಸೂರಿ. 'ಬಂದು ನೋಡಿದಾಗ ಒಡವೆ ವಸ್ತ್ರವೆಲ್ಲ ಹೇಗೋ ತುರುಕಿತ್ತು, ಭಯ ಆಯಿತು. ನೀನು ಹೋದ ಸ್ವಲ್ಪ ಹೊತ್ತಿಗೆ, ನಾನಿನ್ನೂ ಬಚ್ಚಲಲ್ಲಿದ್ದಾಗ ಆಚೆ ಬೀದಿ ಕಿಟ್ಟಿ ಗಂಟೆ ಎಷ್ಟಾಯಿತು ಅಂತ ಕೇಳೋಕ್ಕೆ ಬಂದಿದ್ದ. ಅವನ ಕೈ ಭದ್ರವಿಲ್ಲ. ಅವನೇ ಮಹಡಿ ಹತ್ತಿ ಬೀಗ ಒಡೆದು ಹೋದನೇನೊ ಅಂದುಕೊಂಡಿದ್ದೆ. ಈಗ ನಿಸ್ಸೂರಾಯಿತು ಬಿಡು' ಅಂದರು. ಅವರ ಭಾರ ಇಳಿದಿತ್ತು. ಈಗ ಉಳಿದರ್ಧಕ್ಕೆ ಬಂದರು. 'ಟ್ರಂಕಲ್ಲಿ ಉಳಿದದ್ದೆಲ್ಲ ಇರೋ ಹಾಗಿದೆ. ಆದರೆ ಒಂದು ವಜ್ರದುಂಗುರ ಮಾಯವಾಗಿದೆ. ನಿಮ್ಮ ಮುತ್ತಾತನ ಕಾಲದ್ದು. ನನ್ನ ಮದುವೇಲಿ ನಿಮ್ಮ ತಾತ ಬೆಲೆ ಕಟ್ಟಿಸಿದಾಗ ಐದು ಸಾವಿರ ಬಾಳ್ತಿತ್ತು. ಈಗ ಐವತ್ತು ಸಾವಿರವೇ ಆಗುತ್ತೇನೋ. ನಿನ್ನ ಮದುವೆ ದಿನ ಸೊಸೇಗೆ ನಿನ್ನ ಕೈಯಿಂದ ತೊಡಿಸೋಣ ಅಂತ ಇಟ್ಟಿದ್ದೆ. ನೀನೇನಾದರೂ ತೊಗೊಂಡೆಯಾ' ಎಂದು ಸೂರಿಯ ಮುಖವನ್ನೇ ನೋಡುತ್ತ ಉತ್ತರಕ್ಕೆ ಕಾದು ಕುಳಿತರು.

ಸೂರಿಯ ಕಾಲ ಕೆಳಗಿನ ನೆಲ ಕುಸಿದಿತ್ತು. ತಾನು ಹರಳುಂಗುರವೆಂದುಕೊಂಡದ್ದು ವಜ್ರದುಂಗುರವೆ? ಐವತ್ತು ಸಾವಿರ ರೂಪಾಯಿನ ಉಂಗುರವನ್ನು ಪೆದ್ದುಪೆದ್ದಾಗಿ ಜೋನಿಗೆ ಕೊಟ್ಟುಬಿಟ್ಟೆನಲ್ಲ ಎಂದು ಮನಸ್ಸು ವಿಲ ವಿಲ ಒದ್ದಾಡಿತು. ಆದರೂ ತನ್ನ ಮನಃಸ್ಥಿತಿಯನ್ನು ಬಯಲು ಮಾಡದೆ 'ಹಾಗೆಲ್ಲ ನಿನ್ನ ಕೇಳದೆ ಉಂಗುರ, ಗಿಂಗರ ತೊಗೋತೀನೆ ನಾನು? ಇತ್ತೊ, ಇಲ್ಲವೋ, ಎಲ್ಲಿ ಹೋಯಿತೊ' ಎಂದವನು ಅಲ್ಲಿಂದೆದ್ದು ತನ್ನ ಕೋಣೆಗೆ ಹೊರಟ.

ಗೌರಮ್ಮ ಆಡುವುದೆಲ್ಲವನ್ನೂ ಒಂದೇ ಸಲ ಆಡಿ ಮುಗಿಸಿಬಿಡಬೇಕೆಂದು 'ಇನ್ನೊಂದು ಮಾತು. ನಿನ್ನ ಮದುವೆ ವಿಷಯ ಏನು ನಿರ್ಧಾರ ಮಾಡಿದೆ?' ಎಂದು ಶುರು ಮಾಡಿದರು. ಸೂರಿ ಇವತ್ತು ಯಾಕೋ ಪರೀಕ್ಷೆಯ ಮೇಲೆ ಪರೀಕ್ಷೆ ಎಂದು ಮನಸ್ಸು ಗಟ್ಟಿ ಮಾಡಿಕೊಂಡ. 'ಇನ್ನು ಬೇರೆ ಮದುವೆಯ ಪ್ರಶ್ನೆಯೇ ಇಲ್ಲ. ಒಂದೇ ಸಲಕ್ಕೆ ಈ ವಿಷಯಕ್ಕೆ ಕೊನೆಹಾಕಬೇಕು' ಎಂದವನೇ ಸಮಯ ಸ್ಫೂರ್ತಿಯಿಂದ 'ಅಮ್ಮಾ, ನಿಜ ಹೇಳಿಬಿಡಲೆ? ಅವತ್ತು ಟ್ರಂಕ್ ತೆಗೆದಾಗ ನನ್ನ ಜಾತಕ ಸಿಕ್ಕಿತು. ವಾರ ಬಿಟ್ಟು ಒಂದು ದಿನ ಮೈಸೂರಿಗೆ ಹೋಗಿದ್ದೆನಲ್ಲ, ಯಾಕೆ ಅಂತಿ? ಜಾತಕಾನ ಅರಮನೆ ಜೋಯಿಸರಿಗೆ ತೋರಿಸಿ ಲಗ್ನ ಯಾವಾಗ ಕೂಡಿ ಬರುತ್ತೆ ಅಂತ ಕೇಳೋಕ್ಕೆ! ಅವರು ಲೆಕ್ಕ ಹಾಕಿ ಹೇಳಿದರು. 'ಜಾತಕದಲ್ಲಿ ಮದುವೆ ಯೋಗ ಇಲ್ಲ. ನೀನು ಮದುವೆಯಾಗಬಹುದು, ಆದರೆ ಮದುವೆ ಆದ ಮೂರು ತಿಂಗಳಿಗೆ ಹೆಂಡತಿ ವಿಧವೆ ಆಗ್ತಾಳೆ' ಅಂತಾರೆ. ಮಹಾರಾಜರ ಜಾತಕ ನೋಡೋರು ಅವರು. ನೀನು ಹಟ ಮಾಡಿದರೆ ನಾನು ನಾಳೇನೇ ಮದುವೆಗೆ ಸಿದ್ಧ, ಉಳಿದ ಜವಾಬ್ದಾರಿ ನಿನ್ನದು' ಎಂದು ತನ್ನ ಸುಳ್ಳಿಗೆ ತಾನೇ ತಲೆದೂಗುತ್ತ ಮಹಡಿ ಹತ್ತಿದ. ಗೌರಮ್ಮ ಗರಬಡಿದವರಂತೆ ತಲೆಯ ಮೇಲೆ ಕೈಹೊತ್ತು ಕಣ್ಣೀರು ಹಾಕುತ್ತ ಕೂತರು.

ಹಾಸಿಗೆಯ ಮೇಲೆ ಕಾಲು ಚಾಚಿ ಸೂರಿ ತನ್ನ ಒಳ ಪ್ರಪಂಚಕ್ಕೆ ತಿರುಗಿದ. ಒಂದು ಕ್ಷಣ ಜೋನಿಯ ಮೇಲೆ ತುಂಬ ಕೋಪ ಬಂತು. ಆದರೆ ಮರುಕ್ಷಣ 'ಅವಳದ್ದೇನು ತಪ್ಪು? ಅದನ್ನು ಅವಳು ಕೇಳಿದ್ದು ಉಡುಗೊರೆಯಾಗಿ. ಅದು ವಜ್ರದುಂಗುರ, ಅದರ ಬೆಲೆ ಐವತ್ತು ಸಾವಿರ ಎಂದು ಅವಳಿಗೇನು ಗೊತ್ತಿತ್ತೆ? ಅಮ್ಮ ಅದನ್ನು ಸೊಸೆಗಾಗಿ ಇಟ್ಟಿದ್ದೆ ಅಂದಳಲ್ಲವೆ? ಸರಿ ಜೋನಿಯೇ ಮನೆಯ ಸೊಸೆತಾನೆ? ಎಂದು ಸಮಾಧಾನಪಟ್ಟುಕೊಂಡು 'ಮುಂದೆ ಇದನ್ನೆಲ್ಲ ಜೋನಿಗೆ ಹೇಳಬೇಕು, ತಮಾಷೆಯಾಗಿರುತ್ತೆ' ಎಂದು ಮನಸ್ಸಿನಲ್ಲಿಯೇ ಗುರುತು ಹಾಕಿಕೊಂಡ.